


ಇದು ಜೀವನದಲ್ಲಿ ಸಾಫಲ್ಯವನ್ನು ಸಾಗಿಸುವ ಪರಿಯಾಗಿದೆ. ಇದುವೇ ಎಲ್ಲ ಪವಿತ್ರ ಗ್ರಂಥಗಳ ಸಾರವಾಗಿದೆ.

# ಕುಂದ ಸತ್ಯನಾರಾಯಣ ಕಲಾಧಾಮಂ

ಇದೇ ಬದುಕಲ್ಲಿ ದಿವ್ಯ ಜೀವನದ ಭಾವನಾತ್ಮಕ ಅನುಭವ.

ಸುರೇಂದ್ರಪುರಿ, ಯಾದಗಿರಿ ಗುಟ್ಟ ಹತ್ತಿರ, ಹೈದರಾಬಾದ್‌ನಿಂದ 60 ಕಿ.ಮೀ. **Ph: 9000788019, 08685-236679. www.mythologicalmuseum.org**

ಕುಂದ ಸತ್ಯನಾರಾಯಣ ಕಲಾಧಾಮಂ ಕಲಾತ್ಮಕತೆಯ ವಾಸ್ತುಶಿಲ್ಪದ ವೈಭವ ಹಾಗೂ ಸರ್ವ ದಿವ್ಯ ಲೋಕಗಳ ನೆಲೆಯೊಂದಾಗಿ ನಿರ್ಮಾಣಗೊಂಡಿದೆ. ಇದು ಸರ್ವ ದೇವರುಗಳ ಕೃಪಾಕಟಾಕ್ಷವನ್ನು ಸಂದರ್ಶಕರಿಗೆ ಕರುಣಿಸುತ್ತದೆ ಮತ್ತು ಅಲ್ಲಿನ ವಿಸ್ಮಯಕಾರಿ ಹಾಗೂ ಸುಂದರ ವಾಸ್ತುಶಿಲ್ಪಗಳು ಕರ್ತೃವಿನ ಕೌಶಲಗಳನ್ನು ನೆನಪಿಸುವಂತ ಮಾಡುತ್ತವೆ. ಕುಂದ ಸತ್ಯನಾರಾಯಣ ಕಲಾಧಾಮಂ ಪುರಾಣಗಳ ಅಧ್ಯಯನದ ಜಾಗೃತಿಕೇಂದ್ರ (ಪದ್ಮವ್ಯೂಹಂ) ವಾಗಿದ್ದು, ಅದು ಪ್ರತಿಯೊಬ್ಬರನ್ನು ಹರುಷದ ಹೊಸ ಲೋಕಕ್ಕೆ ಕೊಂಡೆಯ್ಯುತ್ತದೆ. ಈ ಎಲ್ಲವೂ ಒಂದೆಂಡೆಯೆಂಬಂತಿರುವ ಸುರೇಂದ್ರಪುರಿ ಕೇಂದ್ರದಲ್ಲಿ ಭಾರತದ ಎಲ್ಲ ಯಾತ್ರಾಸ್ಥಳಗಳ ದೇವ-ದೇವರುಗಳ ದರ್ಶನ ಭಾಗ್ಯ ಪ್ರಾಪ್ತಿಯಾಗುತ್ತದೆ. ಬ್ರಹ್ಮಲೋಕ, ವಿಷ್ಣುಲೋಕ, ಶಿವಲೋಕ, ನಾಗಲೋಕ, ಇಂದ್ರಲೋಕ, ಯಮಲೋಕ, ನರಕಲೋಕ, ಪಾತಾಳಲೋಕ, ಪದ್ಮಶ್ಯೂಹಂ, ಪದ್ಮದ್ವೀಪಂನ ಮಹಾನ್ ದೇವಲೋಕಗಳು ಮತ್ತು ದಶ ಸಹಸ್ರ ಪರಮಪವಿತ್ರ ದೇವರುಗಳನ್ನು ಈ ವಿಸ್ಮಯ ವಿಶ್ವದಲ್ಲಿ ಕಾಣಬಹುದು. ಅವುಗಳೀಗ ಪುರಾಣಗಳು ಅಥವಾ ಪವಿತ್ರ ಗ್ರಂಥಗಳಿಗೆ ಸೀಮಿತಗೊಂಡಿಲ್ಲ, ಅವರನ್ನು ಇಲ್ಲಿ ನೋಡಬಹುದು. ಯಥಾರ್ಥವಾಗಿ ಇದೊಂದು ಅಪೂರ್ವ ಅವಕಾಶವಾಗಿದ್ದು, ನಮಗೆ ಕ್ಷಣಿಕ ವಿಶ್ವ ಹಾಗೂ ಪರಮ ಪವಿತ್ರ ದೇವರುಗಳ ಸಂತೋಷ ಉಣಬಡಿಸುವ ಶ್ರದ್ಧಾಕೇಂದ್ರವಾಗಿದೆ. ರಾಮಾಯಣ , ಮಹಾಭಾರತ , ಭಾಗವತ ಮತ್ತು ಇತರ ಪುರಾಣಗಳ ಚಿತ್ತಾಕರ್ಷಕ ಘಟನೆಗಳನ್ನು ಅತ್ಯಾಧುನಿಕ ಕಲಾತ್ಮಕ ತಂತ್ರಗಳನ್ನು ಬಳಸಿ ಅಸದೃಶ ಹಾಗೂ ಅಭೂತಪೂರ್ವ ರೀತಿಯಲ್ಲಿ ಕಣ್ಮನ ಸೆಳೆಯುವ ವಾಸ್ತುಶಿಲ್ಪಗಳಲ್ಲಿ ಕೆತ್ತಲಾಗಿದೆ. ಮತ್ತು ಅವೆಲ್ಲ ನಮಗೆ ಅವರ್ಣನೀಯ ಅನುಭವ ನೀಡುತ್ತವೆ. ದೇವತೆಗಳು ಹಾಗೂ ರಾಕ್ಷಸರು ಮಂದಾರ ಪರ್ವತ ಬಳಸಿಕೊಂಡು ಕ್ಷೀರಸಾಗರ ಮಥಿಸುವುದನ್ನು ಹೃದಯಸ್ಪರ್ಶಿಯಾಗಿ ಬಿಂಬಿಸಲಾಗಿದೆ. ಅದೇ ರೀತಿಯಾಗಿ, ಮೊಸಳೆಯ ಬಾಯಿಯಿಂದ ಗಜೇಂದ್ರನನ್ನ ಉಳಿಸಲು ವಿಷ್ಣುಪರಮಾತ್ಮನು ಚಕ್ರಧಾರಿಯಾಗಿ ಲಕ್ಷ್ಮೀದೇವಿಯೊಂದಿಗೆ ಬರುತ್ತಿರುವ ದೃಶ್ಯದ ಕೆತ್ತನೆ ಭಕ್ತಿಯ ಪ್ರತೀಕವಾಗಿ ವಿಸ್ಮಯ ಮೂಡಿಸುತ್ತದೆ. ಭಗವದ್ಗೀತೆಯ ಸಂದೇಶದೊಂದಿಗೆ ಅರ್ಜುನನಿಗೆ ದಿವ್ಯಜ್ಞಾನ ಬೋಧಿಸುವ ಶ್ರೀಕೃಷ್ಣ, ಮೇರು ಅಂದಕಾರಿಕೆಯ ಕೆತ್ತನೆಗಳು ನೋಡುಗರ ಹೃದಯ ಸೂರೆಗೊಳ್ಳುತ್ತವೆ. ಅಷ್ಟೇ ಆಕರ್ಷಕವಾದುದು ಕಾಳಿಂಗ ಮರ್ಧನ ಕೃಷ್ಣ. ಗೋವರ್ಧನ ಗಿರಿಧಾರಿ ಶ್ರೀಕೃಷ್ಣ , ಗೊಲ್ಲ ಹೆಂಗಳೆಯರಾದ ಗೋಪಿಕೆಯರೊಂದಿಗೆ ಅವನ ಶೃಂಗಾರ ಒಡನಾಟ , ವಿನೋದಕ್ಕಾಗಿ ಅವರ ವಸ್ತ್ರಗಳನ್ನು ಕದಿಯುವಿಕೆ , ಹಲವು ದೈತ್ಯರ ಸಂಹಾರ ಮತ್ತು ವಸುಧೆಯ  ಅಷ್ಟದಿಕ್ಕುಗಳ ಅಷ್ಟ ಪ್ರಧಾನ ದೊರೆಗಳೊಂದಿಗೆ ಮಧ್ಯದಲ್ಲಿ ಪ್ರಣಯೋನ್ಮತ್ತ ದೇವತೆಗಳನ್ನು ಕೂಡಿಕೊಂಡವನಾಗಿ ಭೋಜನ ಸವಿಯುವ ದೃಶ್ಯ ಪ್ರತಿಬಿಂಬಿಸುವ ಕಲಾಕೃತಿಗಳು ಅತ್ಯಂತ ಸುಂದರವಾಗಿದೆ. ಮತ್ತು ಹೃದಯಸ್ಪರ್ಶಿಯಾಗಿದೆ. ಕೃಷ್ಣ ಪರಮಾತ್ಮ ಬಕಾಸುರನ ಸಂಹಾರ ಮಾಡುವ ದೃಶ್ಯ ಸಂದರ್ಶಕರನ್ನು ಸೆರೆಹಿಡಿಯುತ್ತದೆ.

ಅಸಂಖ್ಯ ದೇವತೆಗಳ ಹಾವಭಾವಗಳು ನೋಡುಗರನ್ನು ಆಕರ್ಷಿಸುತ್ತದೆ. ಪಾರ ಲೌಕಿಕ ಬ್ರಹ್ಮ, ಹನುಮರ ಕಥೆಯನ್ನು ಬಾಲ್ಯದಿಂದಾರಂಭವಾಗಿ ರಾಮಾಯಣದ ಘಟನಾವಳಿತನಕ ಅವರ ಬದುಕಿನ ಪ್ರಧಾನ ವೃತ್ತಾಂತಗಳನ್ನು ತೋರಿಸುವಂತೆ ನಯನ ಮನೋಹರ ಕೆತ್ತನೆಗಳಲ್ಲಿ ಬಿಂಬಿಸಲಾಗಿದೆ.  ಆಂಜನೇಯನ ಜನನ ಅವನ ವ್ಯಾಸಂಗ ಸುವರ್ಚಲಳೊಂದಿಗೆ ವಿವಾಹ ಲಂಕಿಣಿ ಸಂಹಾರ ಸಂಜೀವಿ ಪರ್ವತ ತರುವಿಕೆ ರಾಮ ಲಕ್ಷ್ಮಣರನ್ನು ಹೊತ್ತೊಯ್ಯುವುದು ಆಕಾಶಕ್ಕೆ ನೆಗೆತ ಹಾಗೂ ಅವರನ್ನು ಸುಗ್ರೀವನಲ್ಲಿಗೆ ಕರೆತರುವ ಕಲಾಕೃತಿಗಳು ವಿಸ್ಮಯಕಾರಿಯಾಗಿವೆ. ಹನುಮನಿಂದ ಅಕ್ಷಯ ಕುಮಾರಾದಿಗಳ ವಧೆ , ಬ್ರಹ್ಮಾಸ್ತ್ರದಿಂದ ಹನುಮ ಇಂದ್ರಜಿತುವನ್ನು ನಿರ್ಭಂದಿಸುವಿಕೆ, ಹನುಮ ತನ್ನ ಭಕ್ತರಿಗೆ ಕೈಯಾರೆ ಪ್ರಸಾದ ನೀಡುವ ಕೆತ್ತನೆಗಳು ಭಯವಿಸ್ಮಿತರನ್ನಾಗಿಸುತ್ತದೆ.  ದನದ ಕೆಚ್ಚಲಿನಿಂದ ನೇರ ಹರಿದು ಬರುವ ಬಿಸಿ ಹಾಲು ಅಥವಾ ಕಾಫಿಯ ರುಚಿ ಸವಿಯಬಹುದು. ಪ್ರಾಚೀನ ಮೇರು ಕೃತಿಗಳಿಂದ ಅಹ್ಲಾದಕರ ಘಟನಾವಳಿಗಳನ್ನು ಪ್ರದರ್ಶಿಸುವ ಇನ್ನೂ ಹಲವು ವಿಸ್ಮಯಗಳು ಸುರೇಂದ್ರಪುರಿ ಕುಂದ ಸತ್ಯನಾರಾಯಣ ಕಲಾಧಾಮ/ಕಲಾತ್ಮಕತೆಯ ಪುರಾಣಗಳ ಅಧ್ಯಯನ ಜಾಗೃತಿಕೇಂದ್ರದಲ್ಲಿ ಸಂದರ್ಶಕರಾಗಿ ಬರುವ ಭಕ್ತ ಜನರ ಪ್ರತೀಕ್ಷೆಯಲ್ಲಿದೆ. ಇದು ಸೃಷ್ಟಿಗೆ ಪ್ರತಿಯಾಗಿ ಮರುಸೃಷ್ಟಿಯ ದ್ಯೋತಕವಾಗಿದೆ. ಮತ್ತು ವಿಸ್ಮಯಕಾರಿ ಪವಿತ್ರ ತಾಣವನ್ನು ನೋಡಿ ಆನಂದಿಸಲು ವರ್ಣಿಸಲಸದಳವಾದ ದಿವ್ಯ ದಿಗ್ಭ್ರಮೆಯ ಅನುಭವ ಸವಿಯಬೇಕು.